# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2112(2427) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಇರುವ ಒಟ್ಟು ನಿಗಮಗಳು/ ಮಂಡಳಿಗಳು ಪ್ರಾಧಿಕಾರಗಳೆಷ್ಟು; ಅವುಗಳ ಕಾರ್ಯವ್ಯಾಪ್ತಿ ಯೇನು; ಇವುಗಳಿಗೆ ಕಂತುವಾರು ನಿಗಧಿಪಡಿಸಿದ / ಮಂಜೂರಾದ, ಬಿಡುಗಡೆಯಾದ ಮತ್ತು ಬಾಕಿಯಿರುವ ಅನುದಾನವೆಷ್ಟು; ಈ ಬಗ್ಗೆ ಅನುಸರಿಸುತ್ತಿರುವ ಮಾರ್ಗಸೂಚಿಗಳಾ ವುವು; | ಯೋಜನಾ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ 04 ಮಂಡಳಿಗಳು ಹಾಗೂ 01 ಪ್ರಾಧಿಕಾರ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಕಾರ್ಯವ್ಯಾಪ್ತಿ ಈ ಕೆಳಕಂಡಂತಿವೆ; |

| ಕ್ರ. ಸಂ | ಮಂಡಳಿ/ಪ್ರಾಧಿಕಾರ | ಕಾರ್ಯವ್ಯಾಪ್ತಿ |
|---|---|---|
| 1 | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಬೀದರ್, ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ವಿಜಯನಗರ ಗಳಲ್ಲಿ ಕಾರ್ಯ ವ್ಯಾಪ್ತಿಯನ್ನು ಹೊಂದಿದೆ. |
| 2 | ಕರಾವಳಿ ಅಭಿವೃದ್ಧಿ ಮಂಡಳಿ | ಕರಾವಳಿಯ 3 ಜಿಲ್ಲೆಗಳ 28 ತಾಲ್ಲೂಕುಗಳು ಹಾಗೂ 19 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. |
| 3 | ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ | ಒಟ್ಟು 14 ಜಿಲ್ಲೆಗಳ 57 ತಾಲ್ಲೂಕುಗಳ 70 ವಿಧಾನಸಭಾ ಕ್ಷೇತ್ರಗಳನ್ನು ಒ ಳಗೊಂಡಿದೆ. |
| 4 | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ | ಮಂಡಳಿಯ ವ್ಯಾಪ್ತಿಯಲ್ಲಿನ 10 ಜಿಲ್ಲೆಗಳಲ್ಲಿನ 48 ತಾಲ್ಲೂಕುಗಳ 46 ವಿಧಾನ ಸಭಾ ಕ್ಷೇತ್ರಗಳನ್ನು ಹೊಂದಿರುತ್ತದೆ |
| 5 | ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ | ರಾಜ್ಯದ 19 ಗಡಿ ಜಿಲ್ಲೆಗಳು, 63 ಗಡಿ ತಾಲ್ಲೂಕುಗಳು ಮತ್ತು ರಾಜ್ಯಕ್ಕೆ ಹೊಂದಿಕೊಂಡಿರುವ 06 ಗಡಿ ರಾಜ್ಯಗಳ ಕನ್ನಡ ಪ್ರದೇಶಗಳು ಹಾಗೂ ಹೊರನಾಡು ಪ್ರದೇಶಗಳನ್ನು ಒಳಗೊಂಡಿದೆ. |

2025-26ನೇ ಸಾಲಿನಲ್ಲಿ ಮಂಡಳಿ/ಪ್ರಾಧಿಕಾರಗಳಿಗೆ ನಿಗಧಿಪಡಿಸಿದ / ಮಂಜೂರಾದ, ಬಿಡುಗಡೆಯಾದ ಮತ್ತು ಬಾಕಿಯಿರುವ ಅನುದಾನದ ವಿವರ ಈ ಕೆಳಕಂಡಂತಿದೆ;

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ಮಂಡಳಿ/ ಪ್ರಾಧಿಕಾರ | ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | | ಬಿಡುಗಡೆಗೆ ಬಾಕಿ ಇರುವ ಅನುದಾನ |
|---|---|---|---|---|---|
| | | | ಕಂತು | ರೂ | |
| 1 | ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ | 300000.00 | 1 & 2 | 150000.00 | 0 |
| | | | 3 & 4 | 150000.00 | |
| | | | ಒಟ್ಟು | 300000.00 | |
| 2 | ಕರಾವಳಿ ಅಭಿವೃದ್ಧಿ ಮಂಡಳಿ | 1050.00 | 1 | 389.03 | 0 |
| | | | 2 | 660.98 | |
| | | | **ಒಟ್ಟು** | **1050.01** | |
| 3 | ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ | 3950.00 | 1 & 2 | 1975.00 | 0 |
| | | | 3 | 987.50 | |
| | | | 4 | 987.50 | |
| | | | **ಒಟ್ಟು** | **3950.00** | |
| 4 | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ | 3300.00 | 1 | 825.00 | 0 |
| | | | 2 & 3 | 1650.00 | |
| | | | 4 | 825.00 | |
| | | | **ಒಟ್ಟು** | **3300.00** | |
| 5 | ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ | 1600.00 | 1 & 2 | 750.00 | 0 |
| | | | 3 | 515.00 | |
| | | | 4 | 335.00 | |
| | | 877.00 *ಮರುಹಂಚಿಕೆಯಾದ ಬದ್ಧಿ ಮೊತ್ತ | 5 | 877.00 | |
| | | | **ಒಟ್ಟು** | **2477.00** | |

<table>
<tr><td></td><td></td><td>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸಂವಿಧಾನದ 98ನೇ ತಿದ್ದುಪಡಿ ಅನುಸಾರ ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ದಿನಾಂಕ: 06.11.2013 ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಕಾರ್ಯನಿರ್ವಹಿಸುತ್ತಿದೆ.<br>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಮಂಡಳಿ ಹಾಗೂ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ತನ್ನದೇ ಆದ ಅಧಿನಿಯಮ/ಕಾಯ್ದೆಗಳನ್ನು ರೂಪಿಸಿಕೊಂಡಿದ್ದು, ಆ ಪ್ರಕಾರ ಕಾರ್ಯನಿರ್ವಹಿಸುತ್ತಿವೆ.</td></tr>
<tr><td>(ಆ)</td><td>ಈ ನಿಗಮಗಳು / ಮಂಡಳಿಗಳು / ಪ್ರಾಧಿಕಾರಗಳಿಂದ ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ; ಈ ಮೂರು ಪ್ರದೇಶಗಳಿಗೆ ಅನುದಾನವನ್ನು ಯಾವ ಮಾನದಂಡಗಳ ಆಧಾರದಲ್ಲಿ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತಿದೆ; ಈ ಅನುದಾನದ ಕ್ರಿಯಾ ಯೋಜನೆಯಲ್ಲಿ ಒಟ್ಟು ಎಷ್ಟು ಕೆಲಸಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ; ಅವು ಯಾವುವು; ಈಗಾಗಲೇ ಎಷ್ಟು ಹಣ ಖರ್ಚಾಗಿದೆ; ಇನ್ನು ಎಷ್ಟು ಹಣ ನೀಡಲು ಬಾಕಿ ಇದೆ; ಅದನ್ನು ಯಾವಾಗ ನೀಡಲಾಗುತ್ತಿದೆ; ಈ ಕೆಲಸಗಳನ್ನು ಯಾವ ಸಂಸ್ಥೆಗಳ ಮೂಲಕ ಯಾರು ನಿರ್ವಹಿಸುತ್ತಿದ್ದಾರೆ ;</td><td>2025-26ನೇ ಸಾಲಿನಲ್ಲಿ ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶಗಳಿಗೆ ಈ ಕೆಳಗಿನಂತೆ ಅನುದಾನ ನೀಡಲಾಗಿದೆ.<br>(ರೂ ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ಮಂಡಳಿ/ ಪ್ರಾಧಿಕಾರ</th><th>ಬಿಡುಗಡೆಯಾದ ಅನುದಾನ</th><th>ಕಾಮಗಾರಿಗಳ ಸಂಖ್ಯೆ</th><th>ವೆಚ್ಚವಾದ ಅನುದಾನ *</th><th>ಉಳಿಕೆ ಅನುದಾನ</th></tr>
<tr><td>1</td><td>ಕರಾವಳಿ ಅಭಿವೃದ್ಧಿ ಮಂಡಳಿ</td><td>1050.00</td><td>160</td><td>633.47</td><td>549.50</td></tr>
<tr><td>2</td><td>ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ</td><td>3950.00</td><td>435</td><td>1130.20</td><td>1810.05</td></tr>
<tr><td>3</td><td>ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ</td><td>3300.00</td><td>443</td><td>1362.11</td><td>1937.89</td></tr>
<tr><td>4</td><td>ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ</td><td>2477.00</td><td>09</td><td>2477.00</td><td>0.00</td></tr>
</table>
* ಆರಂಭಿಕ ಶಿಲ್ಕು ಸೇರಿದಂತೆ<br><br>ಆರ್ಥಿಕ ಇಲಾಖೆಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಆದೇಶಗಳನ್ವಯ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.<br><br>ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗಳಲ್ಲಿ ಸಮುದಾಯ ಭವನ, ರಸ್ತೆ, ಚರಂಡಿ, ಕಾಲುಸಂಕ ಹಾಗೂ ಇನ್ನಿತರೆ ಮೂಲ ಸೌಲಭ್ಯಗಳು ಹಾಗೂ ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಶಾಲಾಕೊಠಡಿ, ಶೌಚಾಲಯ, ಗ್ರಂಥಾಲಯ ಕೊಠಡಿ, ಸ್ಮಾರ್ಟ್ ಬೋರ್ಡ್ ಹಾಗೂ ಇನ್ನಿತರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಕಾಮಗಾರಿ ಪೂರ್ಣಗೊಂಡ ನಂತರ 3ನೇ ವ್ಯಕ್ತಿ ಸಂಸ್ಥೆಯಿಂದ ತಪಾಸಣಾ ವರದಿ ಸ್ವೀಕೃತಗೊಂಡ ನಂತರ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.<br><br>ಸದರಿ ಕಾಮಗಾರಿಗಳನ್ನು ಸರ್ಕಾರದ ಅನುಷ್ಠಾನ ಸಂಸ್ಥೆಗಳಾದ ಕೆ.ಆರ್.ಐ.ಡಿ.ಎಲ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಲೋಕೋಪಯೋಗಿ ಇಲಾಖೆ ಹಾಗೂ ನಿರ್ಮಿತಿ ಕೇಂದ್ರಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ.</td></tr>
</table>

| | | |
|---|---|---|
| ಇ) | ಕಳೆದ ಮೂರು ವರ್ಷಗಳಲ್ಲಿ ಯಾವ ನಿಗಮಗಳು/ಮಂಡಳಿಗಳು/ಪ್ರಾಧಿಕಾರಗಳಿಂದ ಕರಾವಳಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಎಲ್ಲಾ ಇಲಾಖೆಗಳು ಸೇರಿದಂತೆ ಈ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಹಿಂದಿರುಗಿಸಲ್ಪಟ್ಟ ಮೊತ್ತವೆಷ್ಟು; ಅದಕ್ಕೆ ಕಾರಣಗಳೇನು; | ಕಳೆದ ಮೂರು ವರ್ಷಗಳಲ್ಲಿ ಯಾವ ನಿಗಮಗಳು/ಮಂಡಳಿಗಳು/ಪ್ರಾಧಿಕಾರಗಳಿಂದ ಕರಾವಳಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ; (ರೂ. ಲಕ್ಷಗಳಲ್ಲಿ) (see table below) ಮಂಡಳಿಗಳಿಗೆ ಬಿಡುಗಡೆಯಾದ ಯಾವುದೇ ಅನುದಾನವನ್ನು ಹಿಂದಿರುಗಿಸಿರುವುದಿಲ್ಲ.<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ರೂ.15000.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಯೋಜನೆಯ ಮಾರ್ಗಸೂಚಿಯನ್ವಯ 2 ವರ್ಷಕ್ಕೂ ಮೇಲ್ಪಟ್ಟು ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ. ಈ ಹಿನ್ನಲೆಯಲ್ಲಿ 3 ಜಿಲ್ಲೆಗಳಿಂದ ರೂ.4.19 ಕೋಟಿಗಳ ಅನುದಾನವು ಜಮೆಯಾಗಿರುತ್ತದೆ. ಸದರಿ ಅನುದಾನದ ಜೊತೆಗೆ ಹೆಚ್ಚುವರಿ ಅನುದಾನ ಸೇರಿಸಿ ರೂ.5.30 ಕೋಟಿ ಅನುದಾನವನ್ನು ಮರುಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ. |
| ಈ) | ಅನುದಾನ ಮೊತ್ತದಲ್ಲಿ ಕಡಿತ ಮತ್ತು ಬಿಡುಗಡೆಯಲ್ಲಿ ವಿಳಂಬವು ವೈಯಕ್ತಿಕ ಹಾಗೂ ಸಾಮುದಾಯಿಕ ಫಲಾನುಭವಿ ಗುರಿಗಳನ್ನು (Reduced Targets) ಮರುನಿಗಧೀಕರಿಸ ಬೇಕಾದ ಅನಿವಾರ್ಯತೆ ಯಿಂದಾಗಿ ಸರ್ಕಾರಿ ಯೋಜನೆಗಳನ್ನು ಕಡಿಮೆ ಜನರಿಗೆ ಸೌಲಭ್ಯಗಳು ತಲುಪುವ ಬಗ್ಗೆ ಸರ್ಕಾರದ ಪರಿಹಾರ ಕ್ರಮಗಳೇನು; | ಕರಾವಳಿ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಡಿ ಯಾವುದೇ ವೈಯಕ್ತಿಕ ಫಲಾನುಭವಿ ಸೌಲಭ್ಯಗಳನ್ನು ನೀಡಲು ಮಂಡಳಿಯ ಅಧಿನಿಯಮದಲ್ಲಿ ಅವಕಾಶವಿರುವುದಿಲ್ಲ. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವಿಶೇಷಚೇತನರಿಗೆ ತ್ರಿಚಕ್ರ ವಾಹನ ಸೌಲಭ್ಯವನ್ನು ಹೊರತುಪಡಿಸಿ ಯಾವುದೇ ವೈಯಕ್ತಿಕ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಮಂಡಳಿ/ಪ್ರಾಧಿಕಾರ | ಬಿಡುಗಡೆಯಾದ ಅನುದಾನ | | | ಒಟ್ಟು ಮೊತ್ತ |
|---|---|---|---|---|---|
| | | 2022-23 | 2023-24 | 2024-25 | |
| 1 | ಕರಾವಳಿ ಅಭಿವೃದ್ಧಿ ಮಂಡಳಿ | 3000.00 | 1050.00 | 1050.00 | 5100.00 |
| 2 | ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ | 2856.00 | 830.00 | 820.00 | 4506.00 |
| 3 | ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ | 45.00 | 0.00 | 65.08 | 110.08 |

| | | |
|---|---|---|
| ಉ) | ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳ ಭೌಗೋಳಿಕ ವ್ಯಾಪ್ತಿ ಮತ್ತು ಅಭಿವೃದ್ಧಿ ಅಗತ್ಯಗಳನ್ನು ಪರಿಗಣಿಸಿ ಬಿಡುಗಡೆಯಾಗುತ್ತಿರುವ ಅನುದಾನವನ್ನು ತರ್ಕಬದ್ಧವಾಗಿ ಹೆಚ್ಚಿಸುವ ಹಾಗೂ ಭವಿಷ್ಯದಲ್ಲಿ ಅನುದಾನ ಹಂಚಿಕೆಯಲ್ಲಿ ಸಮನ್ವಯ ಸಾಧಿಸಲು ಮತ್ತು ಕ್ಷಿಪ್ರ ಸಮಯಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಕೈಗೊಳ್ಳುವ ಕಾಲಮಿತಿಯ ಕ್ರಮಗಳೇನು? | ಪ್ರತಿವರ್ಷ ಆಯವ್ಯಯದಲ್ಲಿ ನಿಗಧಿಯಾಗುವ ಅನುದಾನವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಕಾರ್ಯದರ್ಶಿ ರವರಿಗೆ ಅಧಿಕಾರ ಪ್ರತ್ಯಾಯೋಜಿಸುವ ಆದೇಶದಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಸದರಿ ಅನುದಾನ ಬಿಡುಗಡೆ ಮಾಡುವುದನ್ನು ತರ್ಕಬದ್ಧಗೊಳಿಸುವ ಅಗತ್ಯತೆ ಇರುವುದಿಲ್ಲ ಹಾಗೂ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಹೆಚ್ಚಿಸಲು ಯಾವುದೇ ಪ್ರಸ್ತಾವನೆ ಯೋಜನಾ ಇಲಾಖೆ ಮುಂದೆ ಇರುವುದಿಲ್ಲ. ನಿಗಧಿತ ಕಾಲಮಿತಿಯಲ್ಲಿ ಆರ್ಥಿಕ ಸಾಧನೆ ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. |

**ಸಂಖ್ಯೆ: ಪಿಡಿಎಸ್/23/ಪಿಎಂಎಸ್/2026**

(ಡಿ.ಸುಧಾಕರ್)